Sri M. S. KRISHNAN (Malleswaram).—I want a clarification, Sir.

Mr. SPEAKER.—There is no scope for any clarification. The statement is clear.

Obituary Reference *re* : The death of Sri A. G. Ramachandra Rao

Mr. SPEAKER.—I very much regret to announce the sad demise of Sri A. G. Ramachandra Rao, ex-Member of this House and an Ex-Minister of Mysore State. The demise occurred today. Hon. Members desiring to make any reference may do so.

†ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಅಧ್ಯಕ್ಷರೇ, ನನಗೆ ಇದೀಗ ಶ್ರೀಮಾನ್ ಎ. ಜಿ. ರಾಮಚಂದ್ರರಾಯರ ನಿಧನದ ವಾರ್ತೆ ಬಂದಿದೆ. ನಾನು ಅವರನ್ನು ಮೊನ್ನೆ ಮೊನ್ನೆ ನೋಡಿದಾಗ ದೃಢಕಾಯರಾಗಿದ್ದರು. ಮೃತ್ಯು ಇಷ್ಟು ತೀವ್ರ ಅವರಿಗೆ ಬರುತ್ತದೆ ಎಂಬುದು ಯಾರಿಗೂ ಗೊತ್ತಿರಲಿಲ್ಲ. ಅವರನ್ನು ನಾನು 1956ರ ಪೂರ್ವದಿಂದಲೂ ಬಲ್ಲೆ. 1956 ರಿಂದೀಚೆಗೆ ಅನೇಕ ಸಲ ಅವರ ಜೊತೆಯಲ್ಲಿ ಅನೇಕ ವಿಷಯ ಚರ್ಚೆ ಮಾಡುವ ಅವಕಾಶ ಮತ್ತು ಅವರನ್ನು ಸಮೀಪದಲ್ಲಿ ನೋಡುವ ಅವಕಾಶ ನನಗೆ ಸಿಕ್ಕಿತ್ತು. ಈ ಮಾನ್ಯ ಸಭೆಯ ಅನೇಕ ಸದಸ್ಯರಿಗೆ ಗೊತ್ತಿರುವ ಹಾಗೆ ಅವರು ನಮ್ಮ ದೇಶದ ಸ್ವಾತಂತ್ರ್ಯ ಚಳವಳಿಯಲ್ಲಿ, ಸಂಗ್ರಾಮದಲ್ಲಿ ಎಷ್ಟೋ ರೀತಿಯಲ್ಲಿ ಭಾಗವಹಿಸಿದ್ದಾರೆ. ಮೈಸೂರು ರಾಜ್ಯದಲ್ಲಿ ಕಾಂಗ್ರೆಸ್ ಸಂಸ್ಥೆ ಜನ್ಮ ತಾಳುವುದಕ್ಕೆ ಪೂರ್ವದಲ್ಲೇ ಅವರು ಕಾಂಗ್ರೆಸ್ಸಿಗರಾಗಿದ್ದರು ಎಂಬುವುದನ್ನು ಸದಸ್ಯರು ನೆನಪುಮಾಡಿಕೊಳ್ಳಬಹುದು. ಕಾಂಗ್ರೆಸ್ ಸಂಸ್ಥೆಗೆ ಬಹಳಮಟ್ಟಿಗೆ ಅವರು ಸೇವೆ ಸಲ್ಲಿಸಿದ್ದಾರೆ. ಅವರು ಅಸೆಂಬ್ಲಿ ಸದಸ್ಯರಾಗಿಯೂ ಸೇವೆ ಮಾಡಿದ್ದಾರೆ. 1952 ರಿಂದ 1956ರ ವರೆಗೆ ಅವರು ಮಂತ್ರಿ ಮಂಡಲದಲ್ಲಿ ಮಂತ್ರಿಯಾಗಿ ಸೇವೆ ಸಲ್ಲಿಸಿದರು, ಇತರ ಅನೇಕ ಎರಡನೆಯ ಕಡೆಗಳಲ್ಲೂ ಎರಡನೆಯ ಕೆಪ್ಯಾಸಿಟಿಯಲ್ಲೂ ಬಹಳಮಟ್ಟಿಗೆ ಅವರು ಸೇವೆ ಮಾಡಿ ಅವರು ಜನಾನುರಾಗಿಗಳಾಗಿದ್ದರು. ನನಗೆ ತಿಳಿದ ಹಾಗೆ ಅವರು ಬಹಳ ಸೌಮ್ಯವೃತ್ತಿಯವರು, ಯಾವ ಮಾತನ್ನಾಡಬೇಕಾದರೂ ಬಹಳ ಸೌಮ್ಯ ರೀತಿಯಲ್ಲಿ ಆಡುತ್ತಿದ್ದರು. ಅವರಿಗೆ ಒಳ್ಳೆಯ ಗೌರವವಿತ್ತು. ಅವರು ಇಂದು ನಿಧನರಾಗಿರುವುದು ಮೈಸೂರು ರಾಜ್ಯಕ್ಕೆ ದೊಡ್ಡ ಕೊರತೆಯನ್ನುಂಟುಮಾಡಿದೆಯೆಂದು ನಾನು ತಿಳಿಯುತ್ತೇನೆ. ಇದರಿಂದ ನಮ್ಮೆಲ್ಲರಿಗೂ ಬಹಳಮಟ್ಟಿಗೆ ಅನಮಾಧಾನವಾಗಿದೆ. ಏಕೆಂದರೆ ನಮ್ಮ ಜೊತೆಯಲ್ಲಿ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಅನಂತರ ಅನೇಕ ಸಂದರ್ಭಗಳಲ್ಲಿ ಸೇವೆ ಮಾಡಿದ ಒಬ್ಬ ಒಳ್ಳೆಯ ವ್ಯಕ್ತಿ ಆಗಿದ್ದರು. ಈ ದಿವಸ ಅವರು ನಮ್ಮ ರಾಜ್ಯದಲ್ಲಿ ಇಲ್ಲವೆಂದು ಕೇಳಿ ಬಹಳಮಟ್ಟಿಗೆ ಎಲ್ಲರಿಗೂ ದುಃಖವಾಗಿದೆ. ಅವರು ಇತ್ತೀಚೆಗೆ ರಾಜಕೀಯದಲ್ಲಿ ಹೆಚ್ಚು ಭಾಗವಹಿಸುತ್ತಿರಲಿಲ್ಲ. ಅವರು ಎಲ್ಲರಿಗೂ ಗೊತ್ತಿರುವ ಹಾಗೆ ಶಿಕ್ಷಣ ಚಟುವಟಿಕೆಗಳಲ್ಲಿ ಬಹಳ ಆಕ್ಟಿವ್ ಆಗಿದ್ದರು, ಬಿ. ಎಂ. ಎಸ್. ಇಂಜನಿಯರಿಂಗ್ ಕಾಲೇಜಿನಲ್ಲಿ ಅನೇಕ ರೀತಿಯಲ್ಲಿ ಕೆಲಸ ಕಾರ್ಯ ಮಾಡುತ್ತಿದ್ದರು ಮತ್ತು ಹಿಂದಿಯ ಮೇಲೆ ಬಹಳ ಪ್ರೇಮ ಅವರಿಗಿತ್ತು; ಅದರ ವಿಸ್ತರಣೆಗಾಗಿ ಸಾಕಷ್ಟು ಪ್ರಯತ್ನ ಮಾಡುತ್ತಿದ್ದರು. ಈ ಒಂದು ಸಮಯದಲ್ಲಿ ದೇವರು ಅವರ ಆತ್ಮಕ್ಕೆ ಶಾಂತಿಯನ್ನು ನೀಡಲಿ ಮತ್ತು ಅವರ ಕುಟುಂಬವರಿಗೆ ಅವರ ಅಗಲಿಕೆಯಿಂದ ದೊಡ್ಡ ಆಘಾತವಾಗಿದೆ, ಅದನ್ನು ಸೈರಿಸುವುದಕ್ಕೆ ಅವರಿಗೆ ದೇವರು ಶಕ್ತಿ ಕೊಡಲಿ ಎಂದು ಈ ಸಂದರ್ಭದಲ್ಲಿ ನಾನು ಪ್ರಾರ್ಥನೆಮಾಡುತ್ತೇನೆ.

2-30 P.M.

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸಭಾಪತಿಯವರೇ, ದಿವಂಗತ ಎ. ಜಿ. ರಾಮಚಂದ್ರರಾಯರು ನನ್ನ ಹಾಸನ ಜಿಲ್ಲೆಯಿಂದಲೇ ಬಂದ ತಮ್ಮ ಮಹೋನ್ನತ ವ್ಯಕ್ತಿಗಳು, ಅವರು ಕೇವಲ ಕಾಂಗ್ರೆಸ್‌ನವರಾಗಿ ಅಲ್ಲ ಮೈಸೂರು ದೇಶದ ಒಬ್ಬ ಸುಪ್ರಸಿದ್ಧ ಪ್ರಜೆಯಾಗಿ ಇದ್ದರು. ಅದರಲ್ಲೂ ಎ. ಜಿ. ರಾಮಚಂದ್ರರಾಯರ ಮಾತು ಎಂದರೆ ಅವರದು ದಿಟ್ಟತನದ ಮಾತು. ಯಾವ ಒಂದು ಕಾಲಕ್ಕೂ ತಮ್ಮ ಒಂದು ಅಭಿಪ್ರಾಯವನ್ನು ಯಾವುದೇ ಅಧಿಕಾರಿ ಅಥವಾ ಯಾರನ್ನೇ

ಅದರೂ ಮೆಚ್ಚಿಸುವುದಕ್ಕೆ ಬದಲು ಮಾಡಿಕೊಂಡಂತಹ ವ್ಯಕ್ತಿ ಅವರಲ್ಲ. ಶ್ರೀ ರಾಮಚಂದ್ರ ರಾಯರು ಶುದ್ಧ ಹಸ್ತರಾಗಿದ್ದರು. ಅವರು ಈ ದೇಶದಲ್ಲಿ ಅಪಾರ ಸೇವೆ ಮಾಡಿದ್ದಾರೆ. ಈ ರಾಜ್ಯದ ಮಂತ್ರಿಗಳಾಗಿ ಮತ್ತು ಅನೇಕ ಸಂಸ್ಥೆಗಳ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಯಾವ ಕ್ಷೇತ್ರದಲ್ಲಿಯೇ ದುಡಿದರೂ ಕೂಡ ಈ ರಾಜ್ಯದ ಹಿತವನ್ನು ಬಹಳವಾಗಿ ಗಮನದಲ್ಲಿಟ್ಟುಕೊಂಡು ಸೇವೆ ಮಾಡಿರತಕ್ಕವರು ಅಪರೂಪ, ಅಂತಹ ವ್ಯಕ್ತಿ ಎಂದರೆ ರಾಮಚಂದ್ರರಾಯರು. ಶ್ರೀ ರಾಮಚಂದ್ರರಾಯರು ನೂರಕ್ಕೆ ನೂರರಷ್ಟು ಗಾಂಧಿವಾದಿಗಳು ಆಗಿದ್ದರು ಮತ್ತು ಶುದ್ಧ ಕಾಂಗ್ರೆಸನವರಾಗಿ ಈ ದೇಶಕ್ಕಾಗಿ ದುಡಿದದ್ದನ್ನು ನಾನು ನೋಡಿದ್ದೇನೆ. ಅವರು ಮೈಸೂರು ದೇಶಕ್ಕೆ ಎಷ್ಟೊಂದು ಸೊಗಸಾದ ರಿಪೋರ್ಟನ್ನು ಕೊಟ್ಟಿದ್ದಾರೆ ಎಂದರೆ ಅದನ್ನು ಕಾರ್ಯಗತ ಮಾಡುವುದಕ್ಕೆ ನಮಗೆ ನಿಜವಾಗಿಯೂ ಕೂಡ ಸಾಕಾದಷ್ಟು ಶಕ್ತಿ ಇಲ್ಲ, ಅಂತಹ ಒಂದು ರಿಪೋರ್ಟ್‌ನ್ನು ಕೊಟ್ಟಿದ್ದಾರೆ ಅದು ಅಷ್ಟೊಂದು ಚಂದವಾಗಿದೆ, ಅಷ್ಟೊಂದು ಒಳ್ಳೆಯ ಮಟ್ಟದಲ್ಲಿರತಕ್ಕ ಒಂದು ರಿಪೋರ್ಟ್‌ನ್ನು ರಾಮಚಂದ್ರರಾಯರು ತಮ್ಮ ಅಧಿಕಾರದಿಂದ ಮತ್ತು ರಾಜಕೀಯದಿಂದ ಬಂದಂತಹ ಅನುಭವದಿಂದ ತಯಾರು ಮಾಡಿ ನಮ್ಮ ಮುಂದೆ ಕೊಟ್ಟಿದ್ದರು. ಅವರು ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟಿನ ಸದಸ್ಯರಾಗಿ ಕೆಲಸ ಮಾಡಿದ್ದಾರೆ, ಅನೇಕ ಸಮಿತಿಗಳ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಮತ್ತು ಶ್ರೀಮಾನ್ ಹನುಮಂತಯ್ಯನವರ ಮಂತ್ರಿಮಂಡಲದಲ್ಲಿ ವಿದ್ಯಾಭ್ಯಾಸ ಸುಧಾರಣಾ ಸಮಿತಿಯು ಅವರ ಅಧ್ಯಕ್ಷತೆಯಲ್ಲಿ ನಿರ್ಮಿಟ್ಟು ಅವರು ಒಂದು ದೊಡ್ಡ ರಿಪೋರ್ಟನ್ನೂ ಕೂಡ ಕೊಟ್ಟಿದ್ದಾರೆ. ಅಂತಹ ಒಂದಲ್ಲ ಎರಡಲ್ಲ ಅನೇಕ ರಿಪೋರ್ಟಿಗಳನ್ನು ಕೊಟ್ಟರತಕ್ಕ ಕೀರ್ತಿ ರಾಮಚಂದ್ರರಾಯರಿಗೆ ಹೋಗಿರುವುದಾಗಿದೆ. ಅವರ ದಿಟ್ಟತನ ಅಂತ ಹೇಳಿ ಒಂದು ಮಾತು ಹೇಳಿದೆ. 1946ರಲ್ಲಿ ಕರ್ನಾಟಕ ಆಗಬೇಕು ಅಂತ ಅನ್ನುತ್ತಾ ಇದ್ದ ಕಾಲದಲ್ಲಿ ಶ್ರೀಮಾನ್ ರಾಮಚಂದ್ರರಾಯರ ದಿಟ್ಟ ನಿಲುವು, ದಿಟ್ಟ ವಾದ ಮಾತು ಅನೇಕ ಜನರಿಗೆ ಕಹಿಯಾಗಿದ್ದರೂ ಕೂಡ ಅವರನ್ನು ಧೀರರು ಅಂತ ಕರೆದರು, ಅವರು ಆಗ ಯಾವ ಒಂದು ವಾದವನ್ನು ಹೇಳುತ್ತಾ ಇದ್ದರೋ ಅದನ್ನು ಕೊನೆಯ ಉಸಿರು ಎಳೆಯುವವರೆಗೂ ಇಟ್ಟುಕೊಂಡ ಕೀರ್ತಿ ಅವರದಾಗುತ್ತದೆ. ಇಂತಹ ವ್ಯಕ್ತಿಗಳು ಇವತ್ತು ನಮ್ಮನ್ನು ಅಗಲಿದ್ದಾರೆ, ಅವರ ಆತ್ಮಕ್ಕೆ ಚಿರಶಾಂತಿಯುಂಟಾಗಲಿ ಎಂದು ಹೇಳುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ (ಹರಿಹರ).—ಸ್ವಾಮಿ, ಶ್ರೀಮಾನ್ ಎ. ಜಿ. ರಾಮಚಂದ್ರರಾಯರಿಗೆ ಹಟಾತ್ತನೆ ಉಂಟಾದ ಮರಣದ ವಾರ್ತೆಯನ್ನು ಕೇಳಿ ನನಗಂತೂ ದಿಗ್ಭ್ರಮೆಯಾಯಿತು. ನಿನ್ನೆ ಸಾಯಂಕಾಲ ಅವರನ್ನು ನೋಡಲಿಕ್ಕೆ ಅವರ ಮನೆಗೆ ಹೋಗಿದ್ದಾಗ ಅವರು ಯಾವುದೋ ಹಿಂದೀ ರಿಯಾಸತ್ ಸಭೆಯಲ್ಲಿ ಭಾಗವಹಿಸಲು ಹೋಗಿದ್ದಾರೆ ಎಂದು ಕೇಳಿದೆ. ಅವರ ಜೊತೆಯಲ್ಲಿ ಕೆಲವು ವರ್ಷಗಳ ಕಾಲ ಈ ದೇಶದ ಮಂತ್ರಿಮಂಡಲದಲ್ಲಿದ್ದು ಅವರ ಸಹಪಾಠಿಗಳಾಗಿ ಕೆಲಸ ಮಾಡತಕ್ಕ ಒಂದು ಸುಯೋಗ ನನಗೆ ದೊರಕತ್ತು. ಆ ಸಮಯದಲ್ಲಿ ನಾನು ಅವರ ಸಹಪಾಠಿ ಅನ್ನುವುದಕ್ಕಿಂತ ನನ್ನ ಹಿರಿಯ ಅಣ್ಣಂದಿರಂತೆ ಇದ್ದರು. ಅವರು ನಮಗೆ ಯಾವಾಗಲೂ ಒಳ್ಳೆಯ ಮಾರ್ಗದರ್ಶನ ತೋರಿಸುತ್ತಾ ಇದ್ದರು. ಮತ್ತು ವಿಶ್ವಾಸ ಮತ್ತು ಪ್ರೇಮದಿಂದ ನೋಡುತ್ತಾ ಇದ್ದರು. ಅವರಲ್ಲಿ ನಾನು ಕಂಡಂಥ ಗುಣ ಎಂದರೆ ಯಾರ ವಿಚಾರದಲ್ಲೂ ಅವರು ಎಂದೂ ಕೆಟ್ಟದ್ದು ಬಯಸಿದವರಲ್ಲ. ಮತ್ತು ಜಾತ್ಯಾತೀತವಾದ ರಾಷ್ಟ್ರವನ್ನು ಕಟ್ಟಬೇಕು, ಈ ದೇಶದಲ್ಲಿ ಜಾತೀಯ ಮನೋಭಾವವನ್ನು ಅಳಿಸಬೇಕೆಂಬುದರಲ್ಲಿ ಬಹಳ ಹೆಚ್ಚಿನ ನಂಬಿಕೆ ಇಟ್ಟುಕೊಂಡು ಅವರು ಕೆಲಸ ಮಾಡುತ್ತಾ ಇದ್ದರು, ಸತ್ಯವಾದಿಗಳು. ಮತ್ತು ನಿರ್ಮಲ ಮನಸ್ಸಿನವರು, ಸ್ನೇಹಪರರು. ನಮಗೆ ಗೊತ್ತಿದ್ದ ಹಾಗೆ ಅವರಿಗೆ ಗಂಡು ಮಕ್ಕಳು ಇಲ್ಲ, ಒಬ್ಬರೇ ಒಬ್ಬರು ಹೆಣ್ಣು ಮಗಳು ಇದ್ದಾರೆ. ಅವರು ಎಲ್ಲರನ್ನೂ ಒಂದೇ ಸಮಾನಾಗಿ ನೋಡಿ ಬಹಳ ಪ್ರೀತಿಯಿಂದ ಮತ್ತು ವಿಶ್ವಾಸದಿಂದ ಕಾರ್ಯತಕ್ಕ ಒಂದು ಗುಣ ಅವರಲ್ಲಿತ್ತು. ಯಾರಾದರೂ ಕಷ್ಟದಲ್ಲಿ ಇದ್ದರೆ ಅವರನ್ನು ಕಂಡು ಮರುಗಿ ಕಷ್ಟದಲ್ಲಿ ಸಹಾಯ ಮಾಡಬೇಕೆಂಬ ಗುಣವುಳ್ಳವರಾಗಿದ್ದರು. ನನಗಾದರೂ ಅನಿಸುತ್ತದೆ ನಾವು ಯಾವ ಗಳಿಗೆಯಲ್ಲೋ ಏನೋ, ಯಾವ ನಿಮಿಷದಲ್ಲೋ ಏನೋ ನಮಗೆ ಏನಾಗುತ್ತದೆ ಎಂಬುದು ಗೊತ್ತಿಲ್ಲ, ಬಹಳ ಸ್ಥಿರವಾಗಿ ಇಲ್ಲಿರುತ್ತೇವೆ ಎನ್ನುವ ಹಾಗೆ ನಮ್ಮ ಕಾರ್ಯಗಳನ್ನು ನಡೆಸುತ್ತಾ ಇರುತ್ತೇವೆ. ಅವರು ಆರೋಗ್ಯದ ದೃಷ್ಟಿಯಲ್ಲಿ ಹೇಳುತ್ತಾ ಇದ್ದರು. ನಾನು ಇವತ್ತಿನವರೆಗೂ ಒಂದು ಔಷಧಿ ತೆಗೆದುಕೊಂಡಿಲ್ಲ—ಒಂದು ಔಷಧಿ ತೆಗೆದುಕೊಳ್ಳತಕ್ಕ ಪ್ರಮೇಯ ಬಂದಿರಲಿಲ್ಲ. ನಾನು ಅಷ್ಟೊಂದು ಆರೋಗ್ಯವಾಗಿದ್ದೇನೆ, ದೇವರು ಆರೋಗ್ಯ ಭಾಗ್ಯವನ್ನು ಕೊಟ್ಟಿದ್ದಾನೆ ಇದಕ್ಕಿಂತ ಹೆಚ್ಚು ಯಾವುದೂ ಬೇಡ ಎಂದು. ಆದರೆ ಮೃತ್ಯು ಬರುವ ಕಾಲಕ್ಕೆ ಯಾವ ಕಾಲದಲ್ಲಿ ಬರುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಅವರು ಹೃದಯ ವೇದನೆಯಿಂದ ಸತ್ತು ಹೋದರು ಎಂದು ಈಗ ಅವರ ಅಳಿಯಂದಿರು ಲೋಕೋಪಯೋಗಿ ಇಲಾಖೆ ಜಾಯಿಂಟ್ ಸೆಕ್ರೆಟರಿ

(ಶ್ರೀ ಎಚ್. ಸಿದ್ದವೀರಪ್ಪ)

ಯವರಿಂದ ಕೇಳಿ ಬಹಳ ವ್ಯಥೆಯಾಯಿತು. ಅವರು ನಮ್ಮ ದೇಶದಲ್ಲಿ ಅಪಾರ ಸೇವೆಯನ್ನು ಮಾಡಿದ್ದಾರೆ. ಶ್ರೀಮಾನ್ ಶಿವಪ್ಪನವರು ಮತ್ತು ಮುಖ್ಯಮಂತ್ರಿಗಳು ಒಪ್ಪಣೆ ಕೊಡಿಸಿದ ಹಾಗೆ ಅವರು ಈ ದೇಶದ ಗಣ್ಯ ಹಿರಿಯ ನಾಯಕರು ಮತ್ತು ಶ್ರೇಷ್ಠ ಆಡಳಿತಗಾರರಲ್ಲೊಬ್ಬರಾಗಿದ್ದರು ಎಂದರೆ ಅತಿಶಯೋಕ್ತಿಯಾಗಲಾರದು. ಈಗ ಅವರು ನಮ್ಮನ್ನು ಅಗಲಿ ಹೋಗಿದ್ದಾರೆ, ಅವರು ಎಲ್ಲರೂ ಒಂದು ದಿವಸ ಎಲ್ಲಿಗೆ ಹೋಗಬೇಕೋ ಅಲ್ಲಿಗೇ ಹೋಗಿದ್ದಾರೆ. ಆದರೆ ಅವರು ಇಷ್ಟು ಬೇಗ ಹೋದುದಕ್ಕೆ ವ್ಯಸನಪಡುತ್ತಿದ್ದೇನೆ. ಪರಮಾತ್ಮನು ಅವರ ಆತ್ಮಕ್ಕೆ ಚಿರ ಶಾಂತಿಯನ್ನಿಯಲಿ, ಅವರ ಬಂಧುವರ್ಗ ಬಹಳ ದೊಡ್ಡದು, ಅವರಿಗೆ ಈ ಅಪಾರ ನಷ್ಟದ ದುಃಖ ಸಹಿಸತಕ್ಕ ಶಕ್ತಿಯನ್ನು ದೇವರುಕೊಡಲಿ ಎಂದು ಹೇಳಿ ನಾನು ಅವರ ದುಃಖದಲ್ಲಿ ಭಾಗಿಯಾಗುತ್ತೇನೆ.

†ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಸಭಾಪತಿಗಳೇ: ಈಗತಾನೆ ಮಾನ್ಯ ಮುಖ್ಯ ಮಂತ್ರಿಗಳು ಸಭೆಯ ಮುಂದೆ ಮಂಡಿಸಿದಂಥ ಸಂತಾಪಸೂಚಕ ನಿರ್ಣಯಕ್ಕೆ ಸಂಬಂಧಿಸಿದಂಥ ಶ್ರೀಮಾನ್ ಎ.ಜಿ. ರಾಮಚಂದ್ರರಾಯರ ಸಂತಾಪ ಸೂಚನೆಯ ನಿರ್ಣಯಕ್ಕೆ ನನ್ನ ಬೆಂಬಲವನ್ನು ನೀಡುತ್ತ ಇದೇ ಸಂದರ್ಭದಲ್ಲಿ ಎರಡು ಮಾತುಗಳನ್ನಾಡಲು ಇಚ್ಛೆಪಡುತ್ತೇನೆ. ಅವರಿಗೆ ಹೀಗೆ ಅನಿರೀಕ್ಷಿತವಾಗಿ ಉಂಟಾದ ಮರಣದಿಂದ ನನಗೆ ವೈಯಕ್ತಿಕವಾಗಿ ತುಂಬಲಾರದಂಥ ನಷ್ಟವುಂಟಾಗಿದೆ. ಆ ನಷ್ಟವನ್ನು ಇಷ್ಟೆಂದು ಹೇಳುವುದಕ್ಕಾಗುವುದಿಲ್ಲ. ಈಗ್ಗೆ ಹತ್ತು ನಿಮಿಷಗಳ ಹಿಂದೆ ಮಾನ್ಯ ಮುಖ್ಯ ಮಂತ್ರಿಗಳು ಮಾನ್ಯ ಎ. ಜಿ. ರಾಮಚಂದ್ರರಾಯರ ಅನಿರೀಕ್ಷಿತ ನಿಧನದ ವಾರ್ತೆಯನ್ನು ನನಗೆ ತಿಳಿಸಿದರು. ನನಗೆ ಮಾತನಾಡುವುದಕ್ಕೆ ತುಂಬಾ ಸಂಕಟವಾಗುತ್ತಿದೆ. ಅವರು ನನ್ನ ಕ್ಷೇತ್ರವನ್ನು 1947 ರಿಂದ 1957ರವರೆಗೂ ಪ್ರತಿನಿಧಿಸಿದ್ದರು. ಅವರನ್ನು ನಾನು ಕಳೆದ 25 ವರ್ಷಗಳಿಂದ ವೈಯಕ್ತಿಕವಾಗಿ ಚೆನ್ನಾಗಿ ಬಲ್ಲೆ. ನಿಜವಾಗಿಯೂ ಅವರ ವೈಯಕ್ತಿಕ ಜೀವನ ಬಹಳ ಪವಿತ್ರವಾದದ್ದು. ಅವರ ಜೀವನದಲ್ಲಿ ಅಡಕವಾಗಿದ್ದ ಪವಿತ್ರ ಆದರ್ಶಗಳನ್ನು ನಾವು ನಮ್ಮ ರಾಜಕೀಯ ಜೀವನದಲ್ಲಿ ಅಳವಡಿಸಿಕೊಂಡರೆ ಇಂದು ಈ ರಾಜಕೀಯ ಕ್ಷೇತ್ರದಲ್ಲಿ ತಲೆದೋರಿರತಕ್ಕ ಕ್ಷೋಭೆಯು ಬಹಳ ಮಟ್ಟಿಗೆ ಮಾಯವಾಗಬಹುದೆಂದು ನನಗೆ ನಿಸುತ್ತಿದೆ. ಅವರು ತಮ್ಮ ವೈವಾಹಿಕ ಜೀವನವನ್ನು ಸುಮಾರು ಎರಡು ಎರಡೂವರೆ ವರ್ಷಗಳ ಕಾಲ ಮಾತ್ರ ನಡೆಸಿದರು. ಅವರ ಕುಟುಂಬ ತೀರಿಕೊಂಡ ಮೇಲೆ ಮತ್ತೆ ಅವರು ಪುನರ್ವಿವಾಹವಾಗಲಿಲ್ಲ. ಅವರ ಮಾತಾಪಿತೃಗಳು ಎಷ್ಟು ಬಲವಂತ ಮಾಡಿದಾಗ್ಯೂ ಅದಕ್ಕೆ ಅವರು ಒಪ್ಪಲಿಲ್ಲ. ಅವರು ತಮ್ಮ ಉಳಿದ ಜೀವನವನ್ನು ತ್ರಿಕರಣ ಶುದ್ಧಿಯೆಂದು ನಡೆಸಿದರು. ಹಾಗೆ ಪವಿತ್ರತಮವಾದ ಜೀವನ ನಡೆಸತಕ್ಕ ವ್ಯಕ್ತಿಗಳು ಬಹಳ ಅಪರೂಪ. ಅವರಲ್ಲಿ ನಿಷ್ಠೆ ಹಾಗೂ ಪ್ರಾಮಾಣಿಕತೆಗಳು ತುಂಬಿದ್ದವು. ಅವರು ನನಗೆ ರಾಜಕೀಯದಲ್ಲಿ ಗುರುಗಳೆಂದು ಹೇಳಿದರೆ ತಪ್ಪಾಗಲಾರದು. ಅವರ ಅನಿರೀಕ್ಷಿತ ಮರಣದಿಂದ ದೇಶಕ್ಕೆ ತುಂಬಲಾರದ ನಷ್ಟವುಂಟಾಗಿದೆ. ಅವರ ಆತ್ಮಕ್ಕೆ ದೇವರು ಶಾಂತಿಯನ್ನು ಕೊಡಲೆಂದು ಪ್ರಾರ್ಥಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಪ್ರಭಾಕರ್ (ಪರ್ತೂರು).—ಮಾನ್ಯ ಅಧ್ಯಕ್ಷರೇ, ನಾನು ಈಗತಾನೇ ಈ ಸಭೆಗೆ ಬಂದೆ. ಮಾನ್ಯ ಶ್ರೀ ರಾಮಚಂದ್ರರಾವ್ ಅವರ ನಿಧನದ ವಿಚಾರವನ್ನು ಭಾಷಣಕಾರರ ಮಾತಿನಿಂದ ಕೇಳಿ ಒಂದೆರಡು ವಿಚಾರಗಳನ್ನು ಇಲ್ಲಿ ಹೇಳಬೇಕೆಂದು ನನಗೆ ಪ್ರೇರೇಪಣೆ ಬಂತು. ಮಾನ್ಯ ಶ್ರೀ ಎ. ಜಿ. ರಾಮಚಂದ್ರರಾವ್ ಅವರು ನಮ್ಮ ಹಿರಿಯ ಕಾಂಗ್ರೆಸ್ ಮುಂದಾಳುಗಳಲ್ಲಿ ಒಬ್ಬರು. ಅವರು ಒಂದಕ್ಕಿಂತ ಹೆಚ್ಚು ಸಂಘಸಂಸ್ಥೆಗಳನ್ನು ಬೆಳೆಸುವುದರಲ್ಲಿ ಹೆಚ್ಚಿನ ತ್ಯಾಗಜೀವನವನ್ನು ಮಾಡಿದ್ದರು. ಇಕಾನಾಮಿ ಸಂದರ್ಭದಲ್ಲಿ ಅವರು ಕೊಟ್ಟಿರುವ ವರದಿಯನ್ನು ನೆನೆಸಿ ಕೊಂಡಾಗ್ಲೆ ಅವರ ಹೆಸರು ಅವರ ಮನಸ್ಸಿನ ಮುಂದೆ ಎದ್ದು ಕಾಣುತ್ತದೆ. ಅವರು ಹಿರಿಯ ನಾಯಕರು ಮಾನ್ಯ ಹಿರಿಯ ನಾಯಕರಾದ ಶ್ರೀ ಸಿದ್ದವೀರಪ್ಪನವರು ಹೇಳಿದ ಹಾಗೆ ಹಿಂದೆ ಮಾನ್ಯ ಶ್ರೀ ಕೆ. ಹನುಮಂತಯ್ಯನವರ ಮಂತ್ರಿಮಂಡಲದಲ್ಲಿ ಇವರು ಇದ್ದರು. ರಾಜಕೀಯ ಎಂತಹಗೊಂದಲ ಅಥವಾ ಗೋಜಿನ ಪರಿಸ್ಥಿಯಲ್ಲಿದ್ದರೂ, ಬಹಳ ಶಾಂತರೀತಿಯಿಂದ ವರ್ತಿಸುತ್ತಿದ್ದರು. ಮಾನ್ಯ ಶ್ರೀ ರಾಮಚಂದ್ರರಾವ್ ಅವರಲ್ಲಿದ್ದ ಗುಣಗಳಲ್ಲಿ ನನಗೆ ಕಂಡಿದ್ದು ಏನೆಂದರೆ, ಹನ್ನುಖಿಗಳಾಗಿ ಒಬ್ಬರಿಗೂ ತೊಂದರೆ ಕೊಡದೆ ಕ್ಷೇತ್ರದ ಸೇವೆ ಮಾಡುತ್ತಿದ್ದುದು. ಧರ್ಮಕ್ಕೆ ವಿರೋಧವಾಗಿ ಬಡಬಗ್ಗರಿಗೆ ನೋವಾಗುವ ಸಂದರ್ಭಗಳು ಬಂದಾಗ ಏನು ತ್ಯಾಗ ಮಾಡುವುದಕ್ಕೂ ಸಿದ್ಧರಿದ್ದರು. ಅವರು ಬಡವ ಬಲ್ಲಿದ ಎಂಬ ಭೇದಭಾವ ಇಲ್ಲದೆ ಪ್ರತಿಯೊಬ್ಬರನ್ನೂ ಒಂದೇ ಸಮನಾಗಿ ಕಾಣುತ್ತಿದ್ದರು.

ಹರಿಜನರ ವಿಷಯದಲ್ಲಿ ಬಹಳ ಅಂತಃಕರಣ ಹಾಗೂ ಕಳಕಳವಿತ್ತೆಂದು ಹೇಳಿದರೆ ಅದು ಏನೂ ಅತಿಶಯೋಕ್ತಿಯಾಗಲಾರದು. ತಾವು ಒಂದು ಸ್ಥಾನದಲ್ಲಿದ್ದಾಗ ತಾವೇನಾದರೂ ತಪ್ಪು ಮಾಡುತ್ತಿದ್ದೇನೆಂದು ತಿಳಿದರೆ, ಆಗ ಆ ಸ್ಥಾನ ಹೋದರೂ ಚಿಂತೆ ಇಲ್ಲ, ನಮ್ಮ ಮುಂದಿನ ಜನರು ಏನೆಂದಾರು ಎನ್ನುವ ಒಂದು ನಾಚಿಕೆ ಅವರಲ್ಲಿ ಇತ್ತು. ನಮಗೆ ಅಂಥಾದ್ದನ್ನು ತಿಳಿಗೊಳಿಸುವ ವಿವೇಚನೆ ಅವರಲ್ಲಿ ಬಹಳ ಚೆನ್ನಾಗಿತ್ತು. ರಾಜಕಾರಣಿಗಳಾಗಿರುವವರು ಯಾವಾಗ ಏನು ಬೇಕಾದರೂ ಮಾಡಬಹುದೆಂದು ಇರಲಿಲ್ಲ. ಇತ್ತೀಚೆಗೆ ಕೆಲವರು ಹರಿತವಾದ ಕತ್ತಿಯನ್ನು ಇಟ್ಟುಕೊಂಡಿರುವವರು ವಿವೇಚನೆ ಇಲ್ಲದೆ ವರ್ತನೆ ಮಾಡುವುದನ್ನು ನಾವು ನೋಡುತ್ತಿದ್ದೇವೆ. ಆದರೆ ಅಧಿಕಾರದಲ್ಲಿ ಅವರು ಇದ್ದಾಗ ಎಷ್ಟು ವಿವೇಚನೆಯಿಂದ ವರ್ತನೆ ಮಾಡಬೇಕೋ ಅಷ್ಟು ವಿವೇಚನೆ, ಸೌಜನ್ಯಗಳಿಂದ ಇದ್ದು ಯಾವಾಗಲೂ ನಗುತ್ತಾ ಇರುತ್ತಿದ್ದರು. ಅವರು ಎಂದಿಗೂ ಇಂತಹ ತಪ್ಪನ್ನು ಮಾಡಿದ್ದಾರೆಂದು ಯಾವ ಒಂದು ಅಪಖ್ಯಾತಿಗೂ ಈಡಾಗುತ್ತಾ ಇರಲಿಲ್ಲ. ರಾಜಕೀಯದಲ್ಲಿ, ಎಷ್ಟೋ ಸಂದರ್ಭಗಳಲ್ಲಿ ಹಡಗುಗಳು ನಮುದ್ರದಲ್ಲಿ ತೇಲುತ್ತಾ ಮುಳುಗುತ್ತಾ ಇರುವ ಹಾಗೆ, ಏರುಪೇರುಗಳು ಆಗುವುದೂ ಉಂಟು. ಅಂತಹ ಸಂದರ್ಭಗಳಲ್ಲಿ ಇವರು ತೆರೆಯ ಮರೆಯಲ್ಲಿದ್ದು ಸೇವೆಮಾಡಿಸ್ಫೂರ್ತಿ ಅನಿಸಿಕೊಂಡಿದ್ದಾರೆ. ಅಂತಹ ಒಂದು ದೊಡ್ಡ ಶ್ರೇಣಿಗೆ ಮಾನ್ಯ ಶ್ರೀ ರಾಮಚಂದ್ರರಾವ್ ಅವರು ಸೇರಿದ್ದಾರು. ಅನೇಕ ಸಂದರ್ಭಗಳಲ್ಲಿ ಪಾರ್ಟಿಯಲ್ಲಿ ಗೊಂದಲಗಳು ಬಂದಿತ್ತವೆ. ಅಂತಹ ಸಂದರ್ಭಗಳಲ್ಲಿಯೂ ಅವರು ತಮ್ಮ ಒಂದು ವ್ಯಕ್ತಿತ್ವವನ್ನು ಉಳಿಸಿಕೊಂಡಿದ್ದಾರೆ. ಅವರು ಎಷ್ಟು ಧರ್ಮಕಾರ್ಯಗಳನ್ನು ಮಾಡಬೇಕಾಗಿತ್ತೋ ಅಷ್ಟನ್ನೂ ಬಹಳ ಚೆನ್ನಾಕ್ಕಾರವಾಗಿ ಮಾಡುತ್ತಾ, ಮಾರ್ಗದರ್ಶನ ತೋರಿಸಿದ್ದಾರೆ. ಶ್ರೇಷ್ಠ ಹಿರಿಯ ನಾಯಕರಾಗಿ ಹೆಸರು ಪಡೆದಂಥ ಮಾನ್ಯ ಭಾಷ್ಯಂ ಐಯ್ಯಂಗಾರ್, ತಗಡೂರು ರಾಮಚಂದ್ರರಾವ್, ಪಾಲಳ್ಳಿ ಸೀತಾರಾಮಯ್ಯ, ಮತ್ತು ಅಲೂರು ವೆಂಕಟರಾವ್, ಮುಂತಾದವರ ವರ್ಗಕ್ಕೆ ಇವರು ಸೇರಿದವರು ಎಂಬುದಾಗಿ ನಾವು ಹೇಳಬಹುದು. ಇವರು ಕಣ್ಮರೆಯಾಗಿರುವ ಸಂಗತಿ ಕೇಳಿ ನನಗೆ ದುಃಖ ಒಂದೇ ಅಲ್ಲ, ಮಾರ್ಗದರ್ಶನ ಶಕ್ತಿಗಳಲ್ಲಿ ಒಬ್ಬರ ಸಂಖ್ಯೆ ಕಡಿಮೆಯಾಯಿತೆಂಬ ನೋವು ಇದೆ. ಇವರ ಸೇವೆಯನ್ನು ನಮ್ಮ ದೇಶ ಮರೆಯುವುದಿಲ್ಲ. ಇವರು ಅಧಿಕಾರದಲ್ಲಿದ್ದಾಗ ದರ್ಮಬುದ್ಧಿಯನ್ನು ಚಲಾಯಿಸಿ ಈ ದೇಶಕ್ಕೆ ಮಾರ್ಗದರ್ಶನವನ್ನು ತೋರಿಸಿದ್ದಾರೆ. ಆದ್ದರಿಂದ ಅವರ ಹೆಸರನ್ನು ನಾವು ನೆನೆಸಿಕೊಳ್ಳಬೇಕು, ನಮ್ಮ ರಕ್ತದಲ್ಲಿ ಅವರನ್ನು ಧಾರಣೆಮಾಡಿಕೊಳ್ಳಬೇಕು. ಆಗ ಅವರಿಗೆ ನಿಜವಾಗಿ ಪೂಜ್ಯತೆ ತೋರಿಸಿದಂತಾಗುತ್ತದೆ. ಅವರ ಆತ್ಮಕ್ಕೆ ಶಾಂತಿ ಕೊಡಲಿ ಮತ್ತು ಅವರ ಕುಟುಂಬವರ್ಗದವರಿಗೆ ಈ ನಷ್ಟವನ್ನು ಭರಿಸತಕ್ಕ ಶಕ್ತಿ ಕೊಡಲಿ, ಅವರ ಜ್ಯೋತಿ ನಮ್ಮೆಲ್ಲರ ಮಧ್ಯದಲ್ಲಿದ್ದುಕೊಂಡು ಅವರ ಸಹನೆ, ಶಕ್ತಿ, ಸನ್ಮಾರ್ಗ ತೋರಿಸಲಿ ಎಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

† **Sri H. M. CHANNABASAPPA** (Periyapatna).—Sir, I would be failing in my duty if I do not add a couple of words to what has been said by the Hon. Chief Minister, the Leader of the Opposition, Sri H. Siddaveerappa and other friends. I do remember my association with him extending over a period of thirty years. We have lost one of the great war horses of the freedom fight. His contribution to the freedom fight is something stupendous. He was not only a big fighter but a man who fights with conviction. To illustrate in a word as to how he acted very firmly whenever he felt strongly about matters, I shall give one instance when he functioned as Minister in Sri K. Hanumanthaiya's Cabinet; then I was also his colleague as Minister.

When the question of Reorganization of States came up, he was a man of firm conviction that the linguistic division of the country should not affect the old Mysore State and that Mysore State should remain as it was then, and a separate Karnataka formed. He did not mince matters. He stood by that view and continued to hold that view till to-day. That indicates that in spite of the fact that the whole leadership in the country was in favour of New Karnataka, he was the one solitary man

(SRI H. M. CHANNABASAPPA)

with a few friends who stood against it. That shows, what an amount of firm c nviction he had. There are a number of instances which I could quote. But suffice it to say that it is very rare that we have men of conviction, men who acted according to their conviction and continued to stick to them but in Sri Ramachandra Rao we had one who stood by his conviction till he died.

One word more. He was a Congressman. He dissociated himself from the Congress Party. But still he continued to be a Congressman till he died. He had firm conviction in the Congress ideology. These things indicate that he was a man of very strong principles and that he acted on what he held to be correct till he died.

May his soul rest in peace !

† ಶ್ರೀ ಕೆ. ಪುಟ್ಟಸ್ವಾಮಿ (ನ್ಯಾಯ, ಕಾರ್ಮಿಕ ಮತ್ತು ಸಂಸದೀಯ ವ್ಯವಹಾರ ಶಾಖೆಗಳ ಮಂತ್ರಿಗಳು).—ಮಾನ್ಯ ಶ್ರೀ ಎ. ಜಿ. ರಾಮಚಂದ್ರರಾವ್ ಅವರು ನಮ್ಮ ರಾಜ್ಯಕ್ಕೆ ಅಪಾರವಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ಈ ವಿಚಾರವನ್ನು ಈಗ ಭಾಷಣ ಮಾಡಿದ ಸಭಾಸದಸ್ಯರೆಲ್ಲರೂ ಹೇಳಿದ್ದಾರೆ. ಅವರು ನಮ್ಮ ರಾಜ್ಯದಲ್ಲಿ ಅತ್ಯಂತ ಸಜ್ಜನರಾಗಿ, ಸಾತ್ವಿಕರಾಗಿ ಒಳ್ಳೆಯ ಹೆಸರನ್ನು ಗಳಿಸಿದ್ದಾರೆ. ನಿರ್ಮಲ ಜೀವನವನ್ನು ನಡೆಸಿ ಹಠಾತ್ತನೆ ನಮ್ಮನ್ನು ಅಗಲಿ ಹೋಗಿದ್ದಾರೆ. ಈ ಸಮಯದಲ್ಲಿ ಹೆಚ್ಚು ಭಾಷಣ ಮಾಡುವ ಶಕ್ತಿ ಮಾನ್ಯ ಸಭಾಸದಸ್ಯರಿಗೆ ಇರುವುದಿಲ್ಲ. ಆದ್ದರಿಂದ ಈ ಸಂತಾಪ ಸೂಚನಾ ನಿರ್ಣಯಕ್ಕೆ ಈ ಸಭೆಯ ಅನುಮತಿ ಪಡೆದಮೇಲೆ ಈ ಸಭೆಯನ್ನು 3 ಘಂಟೆಯ ವರೆಗೆ ದಯವಿಟ್ಟು ಮುಂದಕ್ಕೆ ಹಾಕಬೇಕು ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

Mr. SPEAKER.—I fully associate myself with the sentiments expressed by the Hon. Leader of the House, the Leader of the Opposition and all the other hon. Members. From my reading of the faces of the hon. Members, here it is very clear that all the hon. Members associate themselves with the sentiments expressed so far and remember very gratefully the late Sri Ramachandra Rao. In token of respect for the demised leader, I request the hon. Members to stand in silence in their seats for two minutes.

(The House stood in silence for two minutes)

As suggested, I shall communicate condolences of this august House to the bereaved family.

As suggested by the Hon. Minister for Parliamentary Affairs, the House will now rise and meet again at 3 p.m.

The House rose at Fifty Minutes past Two of the Clock and re-assembled at Ten Minutes past Three of the Clock.